ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ದೂರವಾಣಿ : 08272-224902, 298038

ಇ-ಮೇಲ್: wlmadikeri@gmail.com

ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಮಡಿಕೇರಿ ವನ್ಯಜೀವಿ ವಿಭಾಗ, ಮಡಿಕೇರಿ-571201.

ಸಂಖ್ಯೆ: ಎ2.ಬಿಜಿಟಿ.ವಿವ.04/2019-20 ದಿನಾಂಕ:29.03.2019

## ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ-01

ಈ ಮೂಲಕ ಸಾರ್ವಜನಿಕರಿಗೆ/ ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2019-20 ನೇ ಸಾಲಿನಲ್ಲಿ ಮಡಿಕೇರಿ ವನ್ಯಜೀವಿ ವಿಭಾಗದಲ್ಲಿ ಕಳ್ಳಬೇಟೆ ತಡೆ/ ಅರಣ್ಯ ರಕ್ಷಣಾ/ Anti-Depredation ಶಿಬಿರಗಳಿಗೆ ಮತ್ತು ಬೆಂಕಿ ತಡೆ ಕಾವಲುಗಾರರನ್ನು ಸರಬರಾಜು ಮಾಡುವ ಕಾರ್ಯಕ್ಕಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ಕಚೇರಿಯಲ್ಲಿ ಟೆಂಡರನ್ನು ಕರೆಯಲಾಗಿದೆ.

**ಮೊದಲನೆ** ಟೆಂಡರನ್ನು ದಿನಾಂಕ: 02.05.2019 ರಂದು ನಿಗಧಿಪಡಿಸಲಾಗಿದೆ. ಸದರಿ ದಿನದಂದು ನಡೆಯುವ ಟೆಂಡರಿಗೆ ಯಾವುದೇ ಟೆಂಡರು ಬಾರದಿದ್ದಲ್ಲಿ **ಎರಡನೆಯ** ಟೆಂಡರನ್ನು ದಿನಾಂಕ: 13.05.2019 ರಂದು ನಡೆಸಲಾಗುವುದು. ಈ ಬಗ್ಗೆ ಪ್ರತ್ಯೇಕ ಟೆಂಡರು ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

1. **ಮೊದಲನೆ** ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿ: 02.05.2019 ಅಪರಾಹ್ನ 03:00 ಗಂಟೆಗೆ.
   ಅ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸಮಯ ದಿ: 06.05.2019 ರಂದು ಪೂರ್ವಹ್ನ 11.00 ಗಂಟೆಗೆ.
   ಆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಮಯ ದಿ: 06.05.2019 ರಂದು ಅಪರಾಹ್ನ 04:00 ಗಂಟೆಗೆ.
2. **ಎರಡನೇ** ಟೆಂಡರನ್ನು (ಮರು ಟೆಂಡರನ್ನು) ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿ: 13.05.2019 ಅಪರಾಹ್ನ 03:00 ಗಂಟೆಗೆ.
   ಅ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸಮಯ ದಿ: 16.05.2019 ಪೂರ್ವಹ್ನ 11.00 ಗಂಟೆಗೆ.
   ಆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಮಯ ದಿ: 16.05.2019 ರಂದು ಅಪರಾಹ್ನ 04:00 ಗಂಟೆಗೆ.
3. ಕಾಮಗಾರಿಗಳ ವಿವರ **ಅನುಬಂಧ-01**ರಲ್ಲಿ ಮತ್ತು ನಿಬಂಧನೆ/ಷರತ್ತುಗಳನ್ನು **ಅನುಬಂಧ-02**ರಲ್ಲಿ ತಿಳಿಸಲಾಗಿರುತ್ತದೆ.
4. ಕಾಮಗಾರಿಗಳ ವಿವರ/ ಮಾಹಿತಿಗಳನ್ನು ಕೆಳ ಸಹಿದಾರರ ಕಚೇರಿಯಿಂದ/ ಸಂಬಂಧಪಟ್ಟ ವಲಯ ಕಚೇರಿಗಳಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮಡಿಕೇರಿ,

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:-**

1. ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ: 08272-224902/298038.
2. ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಪುಷ್ಪಗಿರಿ- 08276-281107/ ತಲಕಾವೇರಿ-08272-243111/ ಶ್ರೀಮಂಗಲ-08274-246331

ಅನುಬಂಧ-01

_ವೃತ್ತ: ಕೊಡಗು ವಿಭಾಗ: ಮಡಿಕೇರಿ ವನ್ಯಜೀವಿ ವಿಭಾಗ.

-: ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ-01 ಕಾಮಗಾರಿಗಳ ವಿವರ:-

| 2406-02-110-ವನ್ಯಜೀವಿ ಸಂರಕ್ಷಣೆ-0-54-ಪ್ರಾಕೃತಿಕ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನ ನಿರ್ವಹಣೆ ಮತ್ತು ಮಾನವ-ವನ್ಯಪ್ರಾಣಿ ಸಂಘರ್ಷ ಕ್ರಮಗಳು-139 ಪ್ರಧಾನ ಕಾಮಗಾರಿ (ಯೋಜನೆ) | | | | | |
|---|---|---|---|---|---|
| ದಿನಾಂಕ: 01.04.2019 ರಿಂದ 31.03.2020 ರವರೆಗೆ ಪ್ರತಿ ಶಿಬಿರಕ್ಕೆ 04 ಜನ ಕಾವಲುಗಾರರನ್ನು ಒದಗಿಸುವುದು :- | | | | | |
| ಕ್ರ. ಸಂ | ವನ್ಯಜೀವಿ ವಲಯ | ಕೆಲಸದ ಸ್ಥಳ | ಮಜೂರಿಯ ಮೇಲೆ ಸೇವಾ ಶುಲ್ಕ ಶೇಕಡ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ಮೊಬಲಗು ರೂ. |
| 1 | 2 | 3 | 4 | 5 | 6 |
| 1. | ಪುಷ್ಪಗಿರಿ | ಬೀದಳ್ಳಿ | 04 % | 6.71205 | 17,000.00 |
| 2. | -ಅದೇ- | ಗಿರಿಗದ್ದೆ | 04 % | 6.71205 | 17,000.00 |
| 3. | -ಅದೇ- | ಮಾರಿಗುಂಡಿ | 04 % | 6.71205 | 17,000.00 |
| 4. | -ಅದೇ- | ಕೊತ್ತನಡ್ಕ | 04 % | 6.71205 | 17,000.00 |
| 5. | -ಅದೇ- | ಮಾಂದಲಪಟ್ಟಿ | 04 % | 6.71205 | 17,000.00 |
| 6. | -ಅದೇ- | ಕೂಜಿಮಲೆ | 04 % | 6.71205 | 17,000.00 |
| 7. | -ಅದೇ- | ಕಡಮಕಲ್ಲು | 04 % | 6.71205 | 17,000.00 |
| 8. | -ಅದೇ- | ಹಮ್ಮಿಯಾಲ | 04 % | 6.71205 | 17,000.00 |
| 9. | ತಲಕಾವೇರಿ | ತಲಕಾವೇರಿ | 04 % | 6.71200 | 17,000.00 |
| 10. | -ಅದೇ- | ಹಕ್ಕಿಕಂಡಿ | 04 % | 6.71200 | 17,000.00 |
| 11. | -ಅದೇ- | ಮೇಲಡ್ಕ | 04 % | 6.71200 | 17,000.00 |
| 12. | -ಅದೇ- | ನಿಶಾನಿಮೊಟ್ಟೆ | 04 % | 6.71200 | 17,000.00 |
| 13. | -ಅದೇ- | ಚಾಂದಾಟುಕೊಲ್ಲಿ -1st | 04 % | 6.71200 | 17,000.00 |
| 14. | -ಅದೇ- | ಚಾಂದಾಡುಕೊಲ್ಲಿ-2nd | 04 % | 6.71200 | 17,000.00 |
| 15. | -ಅದೇ- | ನಾಡುಮಲೆ | 04 % | 6.71200 | 17,000.00 |
| 16. | ಮಾಕುಟ್ಟ | ಮಾಕುಟ್ಟ | 04 % | 6.71212 | 17,000.00 |
| 17. | -ಅದೇ- | ಸೊಳ್ಳೆಕೊಲ್ಲಿ | 04 % | 6.71212 | 17,000.00 |
| 18. | -ಅದೇ- | ವಾಟೆಕೊಲ್ಲಿ | 04 % | 6.71212 | 17,000.00 |
| 19. | -ಅದೇ- | ಪೊಟ್ಟಚ್ಚಿಪಾರೆ | 04 % | 6.71212 | 17,000.00 |
| 20. | -ಅದೇ- | ಕೂಟಿಯಾಲ | 04 % | 6.71212 | 17,000.00 |
| 21. | ಶ್ರೀಮಂಗಲ | ನಾಥಂಗಾಲ | 04 % | 6.71200 | 17,000.00 |
| 22. | -ಅದೇ- | ನರಿಮಲೆ | 04 % | 6.71200 | 17,000.00 |
| 23. | -ಅದೇ- | ಆಬ್ಬೈಲು | 04 % | 6.71200 | 17,000.00 |
| 24. | -ಅದೇ- | ಪೂಕಳ | 04 % | 6.71200 | 17,000.00 |
| 25. | -ಅದೇ- | ಕೂಟಿಯಾಲ | 04 % | 6.71200 | 17,000.00 |
| 26. | -ಅದೇ- | ತೆರಾಲು | 04 % | 6.71200 | 17,000.00 |
| 27. | -ಅದೇ- | ಪಾಚಿಬೈಲು | 04 % | 6.71200 | 17,000.00 |

| 1 | 2 | 3 | 4 | 5 | 6 |
|---|---|---|---|---|---|
| 28. | ಪುಷ್ಪಗಿರಿ | ವಣಚಲ್ಲು | 04 % | 6.71170 | 17,000.00 |
| 29. | ಮಾಕುಟ್ಟ | ಕೊಕ್ಕ | 04 % | 6.71170 | 17,000.00 |
| ದಿನಾಂಕ: 01.04.2019 ರಿಂದ 31.03.2020 ರವರೆಗೆ<br>ಪ್ರತಿ ಶಿಬಿರಕ್ಕೆ 05 ಜನ ಕಾವಲುಗಾರರನ್ನು ಒದಗಿಸುವುದು :- | | | | | |
| 30. | ಪುಷ್ಪಗಿರಿ | ಮುಟ್ಲು | 04 % | 8.38980 | 21,000.00 |
| 31. | ತಲಕಾವೇರಿ | ತಣ್ಣಿಮಾನಿ | 04 % | 8.38980 | 21,000.00 |
| 32. | ಮಾಕುಟ್ಟ | ವಿ-ಬಾಡಗ | 04 % | 8.38980 | 21,000.00 |
| 33. | ಶ್ರೀಮಂಗಲ | ಬಿರುನಾಣಿ | 04 % | 8.38980 | 21,000.00 |
| ದಿನಾಂಕ: 01.04.2019 ರಿಂದ 31.05.2019 ರವರೆಗೆ<br>ಪ್ರತಿ ವಲಯಕ್ಕೆ 15 ಜನ ಬೆಂಕಿ ತಡೆ ಕಾವಲುಗಾರರನ್ನು ಒದಗಿಸುವುದು :- | | | | | |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯೂಹೆಚ್-ಪುಷ್ಪಗಿರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | |
| 34. | ಪುಷ್ಪಗಿರಿ | ಪುಷ್ಪಗಿರಿ ವನ್ಯಜೀವಿ ವಲಯ | 04 % | 4.19420 | 10,500.00 |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯೂಹೆಚ್-ತಲಕಾವೇರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | |
| 35. | ತಲಕಾವೇರಿ | ತಲಕಾವೇರಿ ವನ್ಯಜೀವಿ ವಲಯ | 04 % | 4.19420 | 10,500.00 |
| 2406-02-110-0-47-ಸಿಎಸ್ಎಸ್-ಐಡಿಡಬ್ಲ್ಯೂಹೆಚ್-ಬ್ರಹ್ಮಗಿರಿ-139 ಪ್ರಧಾನ ಕಾಮಗಾರಿ (ಯೋಜನೆ) | | | | | |
| 36. | ಮಾಕುಟ್ಟ | ಮಾಕುಟ್ಟ ವನ್ಯಜೀವಿ ವಲಯ | 04 % | 4.19420 | 10,500.00 |
| 37. | ಶ್ರೀಮಂಗಲ | ಶ್ರೀಮಂಗಲ ವನ್ಯಜೀವಿ ವಲಯ | 04 % | 4.19420 | 10,500.00 |
| • ಕ್ರ.ಸಂ: 30 ರಿಂದ33 ರವರೆಗಿನ ಕಾಮಗಾರಿಗಳನ್ನು ಅನುಸೂಚಿತ **ಜಾತಿಗಳ** ವರ್ಗಕ್ಕೆ ಮೀಸಲಿರಿಸಲಾಗಿದೆ.<br>• ಕ್ರ.ಸಂ: 34 ರಿಂದ 37 ರವರೆಗಿನ ಕಾಮಗಾರಿಯನ್ನು ಅನುಸೂಚಿತ **ಪಂಗಡಗಳ** ವರ್ಗಕ್ಕೆ ಮೀಸಲಿರಿಸಲಾಗಿದೆ. | | | | | |

ಮಡಿಕೇರಿ.
ದಿನಾಂಕ: 29.03.2019

ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮಡಿಕೇರಿ,

## ಅನುಬಂಧ-02

## ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ-01 ಟೆಂಡರ್ ಷರತ್ತು ಮತ್ತು ನಿಬಂಧನೆಗಳು

1. ಈ ವಿಭಾಗದಲ್ಲಿ ನೊಂದಣಿಯಾಗಿರುವ ಅರಣ್ಯ ಗುತ್ತಿಗೆದಾರರು ಮಾತ್ರ ಈ ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.
2. ಟೆಂಡರಿಗೆ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಅರಣ್ಯ ಇಲಾಖೆಯ ಯಾವುದಾದರು ವಿಭಾಗದಲ್ಲಿ **ಡಿಫಾಲ್ಟರ್ ಆದವರು / ಕಪ್ಪುಪಟ್ಟಿಯಲ್ಲಿ ಸೇರಿದವರು / ಕಾರ್ಯಯನ್ನು ಪೂರ್ಣಗೊಳಿಸದೇ ಬಿಟ್ಟುಹೋದವರು** ಟೆಂಡರಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
3. ಅರಣ್ಯ ಮೊಕದ್ದಮೆ/ ಇತರೆ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಎದುರಿಸುತ್ತಿರುವವರು/ ಭಾಗಿಯಾಗಿರುವವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.
4. ಷರತ್ತು ಕ್ರ.ಸಂ: (02) ಮತ್ತು (03)ರಲ್ಲಿ ಇರುವ ವಿಚಾರಗಳಲ್ಲಿ ಟೆಂಡರುದಾರರು ಭಾಗಿಯಾಗಿರುವುದಿಲ್ಲವೆಂದು ರೂ. 20.00 ರ ಛಾಪಾ ಕಾಗದದಲ್ಲಿ ಶಪಥ ಪತ್ರವನ್ನು ನೋಟರಿಯಿಂದ ದೃಢೀಕರಿಸಿ ಟೆಂಡರ್ ಫಾರಂನೊಂದಿಗೆ ಲಗತ್ತಿಸಿ ಟೆಂಡರಿನಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.
5. ಅನುಸೂಚಿತ ಜಾತಿ/ಪಂಗಡಗಳಿಗೆ ಮೀಸಲಿಡಲಾದ ಕಾಮಗಾರಿಗಳಿಗೆ ಭಾಗವಹಿಸುವವರು ಕಡ್ಡಾಯವಾಗಿ ದೃಢೀಕೃತ ಜಾತಿ ಪ್ರಮಾಣ ಪತ್ರವನ್ನು ಟೆಂಡರಿಗೆ ಭಾಗವಹಿಸುವಾಗ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.
6. **ಟೆಂಡರುದಾರರು ಮಾನವ ಹೊರ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಈ ಕೆಳಕಂಡ ಕಾಯ್ದೆಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಮಾಡಿರಬೇಕು.**
    a. ಕಾರ್ಮಿಕ ಕಾಯ್ದೆ.
    b. ಕಾರ್ಮಿಕ ಭವಿಷ್ಯ ನಿಧಿ (ಇ.ಪಿ.ಎಫ್) ಕಾಯ್ದೆ.
    c. ಕಾರ್ಮಿಕ ಇ.ಎಸ್.ಐ ಕಾಯ್ದೆ.
    d. ಆದಾಯ ತೆರಿಗೆ ಕಾಯ್ದೆ.
    e. ಜಿ.ಎಸ್.ಟಿ ತೆರಿಗೆ ಕಾಯ್ದೆ.
7. ಹೊರ ಸಂಪನ್ಮೂಲ ಏಜೆನ್ಸಿಯಾಗಿ ಈ ಹಿಂದೆ ಮಾನವ ಸಂಪನ್ಮೂಲ ಸೇವೆಯನ್ನು ವಿವಿಧ ಸರ್ಕಾರಿ ಇಲಾಖೆಗಳಿಗೆ ನೀಡಿರುವ ವಿವರ ಮತ್ತು ದೃಢೀಕೃತ ದಾಖಲೆಗಳನ್ನು ಸಲ್ಲಿಸಬೇಕು
8. ಇಲಾಖೆಯು ಸೂಕ್ತ/ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ. ಆಯ್ಕೆ ಮಾಡಿದ ಅಭ್ಯರ್ಥಿಗಳನ್ನು ಯಶಸ್ವಿ ಟೆಂಡರುದಾರರು ತಮ್ಮ ಏಜೆನ್ಸಿಯಲ್ಲಿ ಅವರನ್ನು ನೋಂದಣಿ ಮಾಡಿಕೊಂಡು ಅವರ ಸೇವೆಯನ್ನು ತನ್ನ ಏಜೆನ್ಸಿ ಮೂಲಕ ಇಲಾಖೆಗೆ ಒದಗಿಸಬೇಕು. ಸದ್ರಿ ಸಿಬ್ಬಂದಿಗಳು ಇಲಾಖೆಯ ಅಧಿಕಾರಿಗಳು ನೀಡುವ ಮಾರ್ಗದರ್ಶನದಂತೆ ಸೇವೆ ಸಲ್ಲಿಸುವಂತಿರಬೇಕು.
9. ಯಾವುದೇ ಕಾರಣಕ್ಕೂ ಇಲಾಖಾ ಅಧಿಕಾರಿಗಳ ಗಮನಕ್ಕೆ ತರದೆ ಏಜೆನ್ಸಿಯು ತನ್ನ ಸಿಬ್ಬಂದಿಗಳನ್ನು ಹಿಂಪಡೆಯಬಾರದು ಹಾಗೂ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮಾಡಬಾರದು.
10. ಟೆಂಡರುದಾರರು ಹೊರಸಂಪನ್ಮೂಲದಿಂದ ನೀಡುವ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಾಪಾಯ, ಆಕಸ್ಮಿಕ ಘಟನೆಗಳು ಸಂಭವಿಸಿ ತೊಂದರೆ/ ನಷ್ಟ ಉಂಟಾದಲ್ಲಿ ಅದಕ್ಕೆ ಟೆಂಡರುದಾರರೇ ಹೊಣೆಗಾರರಾಗಿದ್ದು, ಅಂತಹ ಸಿಬ್ಬಂದಿಗಳಿಗೆ ಪರಿಹಾರ ನೀಡಲು ಟೆಂಡರುದಾರರು ಬದ್ಧರಾಗಿರತಕ್ಕದ್ದು. ಇಲಾಖೆ ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ ಮತ್ತು ಸರ್ಕಾರದಿಂದ ಯಾವುದೇ ಪರಿಹಾರ ದೊರೆಯುವುದಿಲ್ಲ. ಪರಿಹಾರವನ್ನು ಗುತ್ತಿಗೆದಾರರೆ ಸ್ವಂತ ಖರ್ಚಿನಿಂದ ಭರಿಸಬೇಕಾಗುತ್ತದೆ.

11. ಟೆಂಡರುದಾರರು ನಿಯೋಜಿಸುವ ಸಿಬ್ಬಂದಿಗಳು ಇಲಾಖೆಗೆ ಯಾವುದೇ ನಷ್ಟ ಉಂಟು ಮಾಡಿದ್ದಲ್ಲಿ ಅದನ್ನು ಟೆಂಡರುದಾರರೇ ಭರಿಸಬೇಕಾಗುತ್ತದೆ.
12. ನಿಯೋಜಿಸಲ್ಪಡುವ ಸಿಬ್ಬಂದಿಗಳು ಕಚೇರಿ/ ಕೆಲಸದ ಸಮಯ ಪಾಲನೆ ಮತ್ತು ಉತ್ತಮ ನಡತೆಯನ್ನು ಕಡ್ಡಾಯವಾಗಿ ಪಾಲಿಸುವುದು.
13. ಟೆಂಡರುದಾರರು ಸಿಬ್ಬಂದಿಗಳು ನಿರ್ವಹಿಸಿದ ಹುದ್ದೆಗಳಿಗೆ ಅನುಸಾರ ಅವರು ಪಡೆಯುವ ವೇತನವನ್ನು (Take home Salary) ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಅವರ ಬ್ಯಾಂಕ್ ಖಾತೆಗೆ (e-transfer) ಪಾವತಿಸಬೇಕು. ಪಾವತಿಸುವ ವೇತನವು ಕನಿಷ್ಟ ವೇತನ ಕಾಯ್ದೆ ಅನ್ವಯ ಇರಬೇಕು. ತಪ್ಪಿದ್ದಲ್ಲಿ ಟೆಂಡರುದಾರರು ಕಾನೂನು ಕ್ರಮಕ್ಕೆ ಒಳಪಡುತ್ತಾರೆ.
14. ಸಿಬ್ಬಂದಿಯ ವೇತನ ಮತ್ತು ಇತರ ಕಡಿತಗಳನ್ನು ಟೆಂಡರುದಾರರು ಸ್ವಂತ ಹಣದಿಂದ ಭರಿಸಿ ನಂತರ ಇಲಾಖೆಗೆ ಬಿಲ್ಲು ಸಲ್ಲಿಸುವ ಮುಖಾಂತರ ಮರು ಪಾವತಿ ಪಡೆಯತಕ್ಕದ್ದು, ಈ ಬಗ್ಗೆ ಮುಂಗಡವಾಗಿ ಯಾವುದೇ ಹಣ ನೀಡಲಾಗುವುದಿಲ್ಲ ಮತ್ತು ಟೆಂಡರುದಾರರು ಇಲಾಖೆಯಿಂದ ಹಣ ಪಡೆದು ನಂತರ ವೇತನವನ್ನು ಸಿಬ್ಬಂದಿಗಳಿಗೆ ನೀಡುವ ಪದ್ಧತಿಯನ್ನು ಅನುಸರಿಸಬಾರದು.
15. ಪ್ರತಿಯೊಬ್ಬ ಸಿಬ್ಬಂದಿ ಹೆಸರಿನಲ್ಲಿ ಇ.ಪಿ.ಎಫ್/ ಇ.ಎಸ್.ಐ ಖಾತೆಗಳನ್ನು ತೆರದು ಆ ಖಾತೆಗಳಲ್ಲಿ ಸಿಬ್ಬಂದಿಯ ಭಾಗ ಮತ್ತು ಎಂಪ್ಲಾಯರ್ಸ್ ಭಾಗದ ಹಣವನ್ನು ಪ್ರತಿ ತಿಂಗಳು ಟೆಂಡರುದಾರರು ತಪ್ಪದೇ ಜಮಾ ಮಾಡಬೇಕು. ಪ್ರತಿ ಮಾಹೆಯ ಬಿಲ್ಲು ಸಲ್ಲಿಸುವಾಗ ಹಿಂದಿನ ತಿಂಗಳಲ್ಲಿ ಇ.ಪಿ.ಎಫ್/ಇ.ಎಸ್.ಐ ಇಲಾಖೆಗೆ ಹಣ ಜಮೆ ಮಾಡಿರುವ ವಿವರವನ್ನು ಬಿಲ್ಲಿನೊಂದಿಗೆ ಸಲ್ಲಿಸಬೇಕು.
16. ಟೆಂಡರುದಾರರು ಯಾವುದೇ ಕಾರಣಕ್ಕೂ ಸಿಬ್ಬಂದಿಗಳ ವೇತನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಅಥವಾ ಪುಕಾರು ಬಂದಲ್ಲಿ ಟೆಂಡರ್ ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಿ ಅಂಗೀಕರಿಸಲಾದ ಟೆಂಡರನ್ನು ರದ್ದು ಪಡಿಸಲಾಗುವುದು.
17. ಇ.ಪಿ.ಎಫ್, ಇ.ಎಸ್.ಐ ಮತ್ತು ಜಿ.ಎಸ್.ಟಿ ತೆರಿಗೆಗಳನ್ನು ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡದಿದ್ದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ ಮತ್ತು ಈ ಹಣದ ದುರುಪಯೋಗದ ಮೇಲೆ ಟೆಂಡರುದಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಹಕ್ಕು ಇಲಾಖೆಗೆ ಇರುತ್ತದೆ.
18. ಟೆಂಡರುದಾರರು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಹಿಸಬಾರದು ಮತ್ತು ಉಪಗುತ್ತಿಗೆ ನೀಡಬಾರದು.
19. ನೌಕರರಿಗೆ ನೀಡಿದ ವೇತನ ಮತ್ತು ಕಡಿತ ಮಾಡಿದ ವಿವಿಧ ವಂತಿಕೆಗಳ ಬಗ್ಗೆ ನೌಕರರಿಗೆ ಪ್ರತಿ ತಿಂಗಳು ಮಾಹಿತಿಯನ್ನು ಲಿಖಿತ ರೂಪದಲ್ಲಿ ನೀಡುವುದು. ಕಡಿತಗೊಳಿಸಲಾದ ವಿವಿಧ ವಂತಿಕೆಗಳನ್ನು ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಿದ ಬಗ್ಗೆ ಆಯಾ ಇಲಾಖೆಯಿಂದ ಪಡೆಯಲಾಗುವ ಮಾಹಿತಿಯನ್ನು ಸಂಬಂಧಪಟ್ಟ ನೌಕರರಿಗೆ ನೀಡುವುದು.
20. ಅಗತ್ಯ ಬಂದಲ್ಲಿ ಇಲಾಖೆಯ ಸೂಚನೆ ಮೇಲೆ ಹೆಚ್ಚಿನ ಸಿಬ್ಬಂದಿಗಳ ಸೇವೆ ಒದಗಿಸುವುದು.
21. ಕಾರ್ಮಿಕ ಇಲಾಖೆ ಹೊರತಡಿಸಿರುವ ಶೆಡ್ಯೂಲ್‌ನಂತೆ ಮಡಿಕೇರಿ ಜೋನ್-2ರ ಅಡಿಯಲ್ಲಿ ಸೇರಿಸಿದ್ದು, ಅದರಲ್ಲಿ ನಮೂದಿಸಿರುವ ವೇತನ ಮತ್ತು ಇತರೆ ಭತ್ಯಗಳನ್ನು ಮಾತ್ರ ಅಳವಡಿಸಿಕೊಂಡು ಇದಕ್ಕೆ ಶೇಕಡವಾರು ಸೇವಾಶುಲ್ಕ (ಕಮಿಷನ್) ನಮೂದಿಸಬೇಕು.
22. ಟೆಂಡರ್‌ನಲ್ಲಿ ಭಾಗವಹಿಸುವ ಅರಣ್ಯ ಗುತ್ತಿಗೆದಾರರು/ ಸಂಸ್ಥೆಯವರು ಕಂದಾಯ ಇಲಾಖೆಯಿಂದ ಪಡೆದಿರುವ **ರೂ. 02.00 ಲಕ್ಷ** ಮೌಲ್ಯದ **ರೆವಿನ್ಯೂ ಸಾಲ್ವೆನ್ಸಿ** (Revenue Solvency) ಪತ್ರವನ್ನು ಟೆಂಡರ್ ಫಾರಂನೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

23. ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಿರುವ ಸ್ಥಳವನ್ನು ಟೆಂಡರುದಾರರೇ ಖುದ್ದಾಗಿ ಬೇಟಿ ಮಾಡಿ/ ಪರಿಶೀಲನೆ ಮಾಡಿ ಆ ಕಾರ್ಯದ ವಿವರವನ್ನು ಖಚಿತಪಡಿಸಿಕೊಳ್ಳತಕ್ಕದ್ದು. ನಿಗಧಿಪಡಿಸಲಾದ ಕಾರ್ಯಗಳ ಸಂಖ್ಯೆ/ ಸ್ಥಳ/ ಮೊಬಲಗು ವ್ಯತ್ಯಾಸವಾದಲ್ಲಿ ಪರಿಷ್ಕೃತ ವಿವರವನ್ನು ಕಾರ್ಯದೇಶದ ಮೊದಲು ನೀಡಲಾಗುವುದು. ಅಂತಹ ಕಾರ್ಯಗಳನ್ನು ಸಹ ನಿರ್ವಹಿಸಬೇಕಾಗಿರುತ್ತದೆ.

24. ಟೆಂಡರಿಗೆ ನೀಡುವ ಇ.ಎಂ.ಡಿ.ಗಳು ಇ-ಪೋರ್ಟಲ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ರೀತಿಯಲ್ಲಿರತಕ್ಕದ್ದು ಮತ್ತು ಅವುಗಳ ಚಲಾವಣೆ ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಟ 60 ದಿನಗಳವರೆಗೆ ಇರತಕ್ಕದ್ದು.

25. ಟೆಂಡರ್‌ನಲ್ಲಿ ಒಪ್ಪಿಗೆಯಾಗುವ ದರಗಳು 2019-20ನೇ ಸಾಲಿನ ಆರ್ಥಿಕ ವರ್ಷದ **31.03.2020** ಅಂತ್ಯದವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಗಳು ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಹೆಚ್ಚುವರಿಯಾಗುವ ಕಾರ್ಯಗಳನ್ನು ಅನುಮೋದನೆಗೊಳ್ಳುವ ಟೆಂಡರಿನ ದರದಲ್ಲಿಯೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಯವರು ಸೂಚಿಸುವಂತೆ ನಿರ್ವಹಿಸತಕ್ಕದ್ದು.

26. ನಿರ್ದಿಷ್ಟ ಕಾರಣಗಳನ್ನು ಸೂಚಿಸದೇ ಟೆಂಡರನ್ನು ಪರಿಷ್ಕರಿಸುವ/ ರದ್ದುಪಡಿಸುವ ಹಕ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರದಾಗಿದ್ದು, ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯಿಂದ ಪಡೆದುಕೊಳ್ಳತಕ್ಕದ್ದು.

27. ಟೆಂಡರನ್ನು **ಮುಂಗಡವಾಗಿ** ಕರೆಯಲಾಗಿದ್ದು, ಕಾರ್ಯಗಳ ಮುಂದೆ ನಮೂದಿಸಿರುವ ಟೆಂಡರ್ ಪರಿಮಾಣ/ ಮೊತ್ತದಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಪೂರ್ಣಗೊಂಡ ಕಾರ್ಯಗಳ ವೆಚ್ಚವನ್ನು ಪಾವತಿಸಲಾಗುವುದು.

28. ಟೆಂಡರ್ ದರವನ್ನು ನಮೂದಿಸುವಾಗ ಇಲಾಖೆಯಿಂದ ನಿಗಧಿಪಡಿಸಲಾದ ಸೇವಾ ಶುಲ್ಕದ ಶೇಕಡ ಮೊತ್ತದ ಮೇಲೆ **(ಅಧಿಸೂಚನೆಯ ಅನುಸೂಚಿ ಕ್ರ.ಸಂ: 03ರಲ್ಲಿ ನಮೂದಿಸಿದ ಶೇಕಡ 04ಕ್ಕಿಂತ ಕಡಿಮೆ ಅಥವಾ ಹೆಚ್ಚು)** ಶೇಕಡವಾರು ಇಂತಿಷ್ಟು ಹೆಚ್ಚು/ ಕಡಿಮೆ ಎಂಬುವುದನ್ನು ಮಾತ್ರ ಟೆಂಡರ್ ನಮೂನೆಯಲ್ಲಿ ನಿಖರವಾಗಿ/ ಸ್ಪಷ್ಟವಾಗಿ ನಮೂದಿಸುವುದು. ಈ ದರವು ಎಲ್ಲಾ ತೆರಿಗೆಗಳು/ ಸಾಗಾಣಿಕೆ ವೆಚ್ಚ/ ಇತರೆ ಎಲ್ಲ ವೆಚ್ಚಗಳನ್ನು ಒಳಗೊಂಡಿರುತ್ತದೆ ಎಂದು ಟೆಂಡರುದಾರರು ತಿಳಿಯತಕ್ಕದ್ದು.

29. ಟೆಂಡರಿನಲ್ಲಿ ಭಾಗವಹಿಸುವವರು ಟೆಂಡರಿಗೆ ನಿಗಧಿಪಡಿಸಿದ ದಿನಾಂಕದ **ಎರಡು ದಿನಗಳಿಗೆ** ಮುಂಚಿತವಾಗಿ ಈ ವಿಭಾಗದಲ್ಲಿ 2019-20ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ಅಲ್ಲದೆ ಆದಾಯ ತೆರಿಗೆ PAN/GST ಸಂಖ್ಯೆ ಹೊಂದಿರಬೇಕು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್ ದಿನದಂದು ಗುತ್ತಿಗೆದಾರರ ನೊಂದಾಣಿ ಮಾಡಲಾಗುವುದಿಲ್ಲ.

30. ಟೆಂಡರುದಾರರು ಮೇಲಿನ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಸಂಪನ್ಮೂಲಗಳ ವ್ಯವಸ್ಥೆಯನ್ನು ಅವರ ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳಬೇಕು.

31. ಅಪ್ರಾಪ್ತ ವಯಸ್ಕರು/ ಕಾನೂನಿನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಯದಂತೆ, ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅಂತಹ ವಿಚಾರ ತಿಳಿದಲ್ಲಿ ಆ ಗುತ್ತಿಗೆಯನ್ನು ರದ್ದುಗೊಳಿಸಿ ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ./ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

32. **2019-20ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ ಮತ್ತು ಅಂದಾಜು ಪಟ್ಟಿಗಳ ಮಂಜೂರಾತಿಯ ನಿರೀಕ್ಷೆಯ ಮೇರೆ ಈ ಟೆಂಡರ್ ಪ್ರಕಟಣೆಯನ್ನು ಕರೆಯಲಾಗಿದೆ. ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆದ ನಂತರ ಅಂದಾಜು ಪಟ್ಟಿಗಳನ್ನು ನೀಡಲಾಗುವುದು.**

33. ಟೆಂಡರ್ ಅಂಗೀಕರಿಸಿದ ನಂತರ ಅನುಮೋದನೆ ಕುರಿತು ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು ಅಲ್ಲಿಯವರೆಗೆ ಸಫಲ ಟೆಂಡರುದಾರರ ಇ.ಎಂ.ಡಿ ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಈ ಅವಧಿಯಲ್ಲಿ ಟೆಂಡರುದಾರರು ಇ.ಎಂ.ಡಿ ಹಣವನ್ನು ವಾಪಸ್ಸು ಪಡೆಯಲು/ ಯಾವುದೇ ಬಡ್ಡಿಯನ್ನು ಪಡೆಯಲು ಅವಕಾಶವಿರುವುದಿಲ್ಲ.

34. ಅತೀ ಕಡಿಮೆ ದರ ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅವುಗಳ ಪೈಕಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಆದ್ದರಿಂದ ಅಂತಹ ಟೆಂಡರುದಾರರು ರಾಜಿ ಒಪ್ಪಂದ ಮಾಡಿಕೊಂಡು ಅಂತಿಮವಾಗಿ ತಿಳಿಸಲಾಗುವ ರಾಜಿ ಒಪ್ಪಂದದ ಲಿಖಿತ ತೀರ್ಮಾನವನ್ನು ಅಂತಿಮಗೊಳಿಸಲಾಗುವುದು.

35. ಗುತ್ತಿಗೆದಾರರು ತಮ್ಮದೇ ಆದ ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಸಲ್ಲಿಸಲ್ಪಟ್ಟಲ್ಲಿ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು. ಈ ಬಗ್ಗೆ ಏನಾದರು ತಕರಾರುಗಳು ಉಂಟಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರ ತೀರ್ಮಾನವೇ ಅಂತಿಮವಾಗಿರುತ್ತದೆ.

36. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಟೆಂಡರುಗಳನ್ನು ಅಂಗೀಕರಿಸುವ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

37. ಟೆಂಡರಿನಲ್ಲಿ ಸಫಲರಾದ ಅರಣ್ಯ ಗುತ್ತಿಗೆದಾರರಿಗೆ ಸ್ಥಿರೀಕರಣ ಆದೇಶ ನೀಡಿದ **07 ದಿನಗಳ** ಒಳಗೆ ಅವರು ಈ ಕಚೇರಿಗೆ ಹಾಜರಾಗಿ ಕಾರ್ಯದ ಒಟ್ಟು ಮೊತ್ತದ **ಶೇ. 05.00 ಭದ್ರತಾ ಠೇವಣಿಯನ್ನು ಮುಂಗಡವಾಗಿ** ಇಲಾಖೆಗೆ ನೀಡಿ (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ ನೀಡುವ ಟೆಂಡರುದಾರರು ಬ್ಯಾಂಕ್ ಗ್ಯಾರಂಟಿ ಅವಧಿಯನ್ನು 15 **ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) **ರೂ.100.00 (ಒಂದು ನೂರು ಮಾತ್ರ)** ಸರ್ಕಾರಿ ಛಾಪ ಕಾಗದದಲ್ಲಿ ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ಪಡೆದ ನಂತರ ನಿಗಧಿಪಡಿಸಿದ ಕಾರ್ಯಯನ್ನು ನಿಗಧಿತ ಅವಧಿಯ ಒಳಗೆ ಪುರ್ಣಗೊಳಿಸತಕ್ಕದ್ದು, ಕಾರ್ಯದ ಅವಧಿಯನ್ನು ವಿಸ್ತರಿಸುವ/ ಕಡಿಮೆಗೊಳಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಹೊಂದಿರುತ್ತಾರೆ.

38. ಒಂದು ವೇಳೆ ಟೆಂಡರುದಾರರು ಇಲಾಖೆಯಿಂದ ನಿಗಧಿಪಡಿಸಿದ ಅಂದಾಜು ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಕಾರ್ಯವನ್ನು ನಿರ್ವಹಿಸಲು ದರಸೂಚಿಸಿ ಅವರು ಸೂಚಿಸಿರುವ ದರವನ್ನು ಇಲಾಖೆಯಿಂದ ಅಂಗೀಕರಿಸಲ್ಪಟ್ಟಲ್ಲಿ ಇಲಾಖೆಯ ದರ ಮತ್ತು ಟೆಂಡರುದಾರರ ದರಕ್ಕೆ ಇರುವ ವ್ಯತ್ಯಾಸದ ಮೊತ್ತವನ್ನು (ರಾಷ್ಟ್ರೀಕೃತ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರಂಟಿ ನೀಡುವ ಟೆಂಡರುದಾರರು ಬ್ಯಾಂಕ್ ಗ್ಯಾರಂಟಿ ಅವಧಿಯನ್ನು 15 **ತಿಂಗಳವರೆಗೆ** ಚಾಲ್ತಿಯಲ್ಲಿರುವಂತೆ ನೀಡುವುದು ಕಡ್ಡಾಯವಾಗಿರುತ್ತದೆ) ಕರಾರು ಒಪ್ಪಂದ ಮಾಡಿಕೊಳ್ಳುವ ಅವಧಿಯಲ್ಲಿ ಇಲಾಖೆಗೆ ಮುಂಗಡವಾಗಿ ನೀಡಲು ಟೆಂಡರುದಾರರು ಬದ್ಧರಾಗಿರಬೇಕು.

39. ಮೇಲಿನ ಕಾರ್ಯಗಳ ಅನುಷ್ಠಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರಿಂದ ಅನುಮೋದಿತ ವಾರ್ಷಿಕ ಕ್ರಿಯಾ ಯೊಜನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಸರ್ಕಾರದಿಂದ ಹಣ ಬಿಡುಗಡೆಯಾಗಲು ತಡವಾದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

40. ಕಾರ್ಯಗಳ ವೆಚ್ಚದ ಬಿಲ್ಲನ್ನು ಪಾವತಿ ಮಾಡುವಾಗ 2018–19ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ವಸೂಲಿ ಮಾಡಲಾಗುವ ಚಾಲ್ತಿಯಲ್ಲಿರುವ ತೆರಿಗೆ/ ಇತರೆ ಕಟಾವಣೆಗಳ ದರದಲ್ಲಿ ನಂತರ ಯಾವುದಾದರೂ ಬದಲಾವಣೆಗಳು ಆದಲ್ಲಿ ಅಂತಹ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರರು ಯಾವುದೇ ತಕರಾರು ಮಾಡದೇ ಕಡ್ಡಾಯವಾಗಿ ಸರ್ಕಾರಕ್ಕೆ ಪಾವತಿಸಲು ಬದ್ಧರಾಗಿರಬೇಕು.

41. ಟೆಂಡರಿಗೆ ನಮೂದಿಸಿರುವ ಕಾರ್ಯಗಳ ಮೊತ್ತವು ಅಂದಾಜು ಮೊತ್ತವಾಗಿದ್ದು, ಹಣ ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣವನ್ನು ಪಾವತಿಸಲಾಗುವುದು. ಮಂಜೂರಾದ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಅದಕ್ಕೆ ಅನುಗುಣವಾಗಿ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಕಾರ್ಯಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ/ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ನಿರ್ವಹಿಸಲು ಗುತ್ತಿಗೆದಾರರು ಬದ್ಧರಾಗಿರಬೇಕಾಗುತ್ತದೆ.

42. ಮೇಲಿನ ಕಾರ್ಯಗಳಿಗೆ ಮುಂಗಡವಾಗಿ ಹಣ ಪಾವತಿ ಮಾಡಲಾಗುವುದಿಲ್ಲ. ಭಾಗಶಃ ಕಾರ್ಯ/ ಅಪೂರ್ಣ ಕಾರ್ಯಗಳಿಗೆ ಯಾವುದೇ ಹಣ ಪಾವತಿ ಮಾಡಲಾಗುವುದಿಲ್ಲ. ಅಲ್ಲದೆ ಟೆಂಡರುದಾರರ ಜವಾಬ್ದಾರಿಯ ಮೇಲೆ ಕಾರ್ಯಗಳನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು. ಅಲ್ಲದೆ ಸದರಿ ಗುತ್ತಿಗೆದಾರರ ಭದ್ರತಾ ಹಣವನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು.

43. ಅರಣ್ಯ ಕೂಲಿಕಾರರ ಸಂಘ/ ಇತರೆ ಸಂಘಗಳು ಮೇಲಿನ ಕಾರ್ಯಗಳಿಗೆ ಟೆಂಡರ್ ನೀಡಲು ಇಚ್ಛಿಸಿದಲ್ಲಿ ಸಂಘಗಳ ನೋಂದಣಿ ನಿಯಮದಂತೆ ಸದರಿ ಸಂಘಗಳು ಕಡ್ಡಾಯವಾಗಿ ಅರಣ್ಯ ಗುತ್ತಿಗೆದಾರರಾಗಿ ಈ ವಿಭಾಗದಲ್ಲಿ ನೋಂದಣಿಯಾಗಿರಬೇಕು ಮತ್ತು ಇ.ಎಂ.ಡಿ/ ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

44. ಸಫಲ ಟೆಂಡರುದಾರರು ಕರಾರು ಒಪ್ಪಂದಕ್ಕೆ ಸಹಿ ಮಾಡಿದ ನಂತರ ಟೆಂಡರನ್ನು ಹಿಂತೆಗೆದುಕೊಂಡಲ್ಲಿ, ನಿಗಧಿತ ಅವಧಿಯ ಒಳಗೆ ಕಾರ್ಯ ಪ್ರಾರಂಭಿಸದಿದ್ದಲ್ಲಿ/ ನಿರಾಸಕ್ತಿ ಹೊಂದಿದ್ದಲ್ಲಿ ಅಂತಹ ಟೆಂಡರುದಾರರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು. ಅಲ್ಲದೇ ಕಾರ್ಯಯನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರಿಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖಾ ವತಿಯಿಂದ ಕಾರ್ಯಗಳನ್ನು ನಿರ್ವಹಿಸಿ ಸರ್ಕಾರಕ್ಕೆ ಉಂಟಾಗುವ ನಷ್ಟದ ಮೊತ್ತವನ್ನು 1963ರ ಕರ್ನಾಟಕ ಅರಣ್ಯ ಅಧಿನಿಯಮ ಸೆಕ್ಷನ್ 109ರ ಭೂ ಕಂದಾಯ ವಸೂಲಿಯಂತೆ ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. ಇದಕ್ಕೆ ಟೆಂಡರುದಾರರು ಬದ್ಧರಾಗಿರತಕ್ಕದ್ದು.

45. ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿಯವರ ಲಿಖಿತ ಅನುಮತಿ ಇಲ್ಲದೇ ಯಾವುದೇ ಕಾರ್ಯಗಳನ್ನು ಟೆಂಡರುದಾರರು ನಿರ್ವಹಿಸಬಾರದು.

46. **ಯಶಸ್ವಿ ಟೆಂಡರುದಾರರ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಅಗತ್ಯಬಿದ್ದರೆ ಅವಶ್ಯಕತೆ ಎನಿಸಿದ ಹೆಚ್ಚುವರಿ ಷರತ್ತುಗಳನ್ನು ವಿಧಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರಿಗೆ ಇದ್ದು ಇದಕ್ಕೆ ಅರಣ್ಯ ಗುತ್ತಿಗೆದಾರರು/ ಟೆಂಡರುದಾರರು ಬದ್ಧರಾಗಿರಬೇಕು.**

47. ಟೆಂಡರ್ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೊಡಗು ವೃತ್ತ, ಮಡಿಕೇರಿ ಇವರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು **ಕೊಡಗು ಜಿಲ್ಲೆಯ** ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.

48. **ಕಾರ್ಯಗಳ ವಿವರ/ ಮಾಹಿತಿ/ನಿಬಂಧನೆಗಳ ಬಗ್ಗೆ ಈ ಕೆಳ ಸಹಿದಾರರ ಕಚೇರಿಯಿಂದ/ ಸಂಬಂಧಪಟ್ಟ ವಲಯ ಕಚೇರಿಗಳಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.**

ಮಡಿಕೇರಿ. ಉಪ ಅರಣ್ಯ ಸಂರಕ್ಷಣಾಧಿಕಾರಿ,

ದಿನಾಂಕ: 29.03.2019 ವನ್ಯಜೀವಿ ವಿಭಾಗ, ಮಡಿಕೇರಿ,